**ದಿನಾಂಕಃ 14.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ವಾದಿ ಪರ ಶ್ರೀ ಎ ಸಿ ವೈ ವಕೀಲರಿಂದಃ**

ನಾನು ಬಗರ್ ಹುಕುಂ ಜಮೀನಿಗೆ ಸಾಗು ಮಾಡುತ್ತಿದ್ದ ಬಗ್ಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿ. ಅರ್ಜಿ ಸಲ್ಲಿಸಿದ ನಂತರ ಸ್ಥಳಕ್ಕೆ ಭೇಟಿ ನೀಡಿ ನಕ್ಷೆಯನ್ನು ತಯಾರಿಸಿರುತ್ತಾರೆ ಅಂದರೆ ಸರಿ. ನಂತರ ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ವರದಿ ಸಲ್ಲಿಸಿರುತ್ತಾರೆ ಅಂದರೆ ಸರಿ. ನಂತರ ಬಗರ್ ಹುಕುಂ ಸಮಿತಿಯವರು ಸದರಿ ವರದಿಯ ಮೇಲೆ ಜಮೀನು ಮಂಜೂರು ಮಾಡುತ್ತಾರೆ ಅಂದರೆ

ಸರಿ. ಮಂಜೂರಾದ ನಂತರ ಸರ್ಕಾರಕ್ಕೆ ಹಣ ಸಂದಾಯ ಮಾಡುತ್ತಾರೆ ಅಂದರೆ ಸರಿ. ಅದರ ನಂತರ ಸಾಗುವಳಿ ಚೀಟಿಯನ್ನು ನೀಡುತ್ತಾರೆ ಅಂದರೆ ಸರಿ. ಹಕ್ಕು ಪತ್ರ ನೀಡಿದ ನಂತರ ನಕ್ಷೆಯನ್ನು ತಯಾರಿಸುವುದಿಲ್ಲ ಅಂದರೆ ಸರಿ. ಗದ್ದೆ ಬಸಪ್ಪ, ಕರಜಿ ಬಂಗಾರಪ್ಪ, ಮದ್ದಿನ ಬಸಪ್ಪ ಮತ್ತು ಚಿಪ್ಪೆ ಈರಪ್ಪ ಇವರಿಗೆ ಒಂದೆ ಸಾರಿ ಮಂಜೂರು ಆಗಿರುತ್ತದೆ ಅಂದರೆ ಸರಿ. ಸಾಕ್ಷಿಗೆ ನಿಪಿ–2 ನ್ನು ತೋರಿಸಲಾಗಿ ಮೇಲೆ ಹೇಳಿದ ನಾಲ್ಕು ಜನರಿಗೆ ಮಂಜೂರಾದ ಜಮೀನಿನ ನಕ್ಷೆ ಎಂದು ಕೇಳಿದಾಗ ಸಾಕ್ಷಿ ನೋಡಿ ಹೌದು ಉತ್ತರಿಸುತ್ತಾರೆ. ಗದ್ದೆ ಬಸಪ್ಪನವರಿಗೆ 1951–52 ನೇ ಸಾಲಿನಲ್ಲಿ ಜಮೀನು ಮಂಜೂರು ಆಗಿರುತ್ತದೆ ಅಂದರೆ ಸರಿ. ಗದ್ದೆ ಬಸಪ್ಪ ರವರಿಗೆ ಜಮೀನು ಮಂಜೂರಾಗುವ ಪೂರ್ದಲ್ಲಿ ನಕ್ಷೆಯಲ್ಲಿ ರಸ್ತೆ ಇದೆಯಾ ಅಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ–2 ರ ಬ್ಲಾಕ್ ನಂ.3 ರಲ್ಲಿ ಯಾವುದೇ ದಾರಿ ಇಲ್ಲ ಅಂದರೆ ಸರಿ. ನಿಪಿ–5 ರಲ್ಲಿ ಗ್ರಾಮಸ್ಥರ ಮಹಜರ್ ನ 2 ನೇ ಕಾಲಂನಲ್ಲಿ ಗ್ರಾಮಸ್ಥರಿಗೆ ದಾರಿ ಇಲ್ಲ ಎಂದು ನಮೂದು ಇದೆ ಅಂದರೆ ಸರಿ. ನಿಪಿ–6 ರಲ್ಲಿ ಇರುವಂತ ದಾರಿಯು ಗ್ರಾಮ ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿಯವರು ಅನುದಾನ ಅಡಿಯಲ್ಲಿ ರಸ್ತೆಯನ್ನು ಮರು ನಿರ್ಮಾಣ ಮಾಡಿರುತ್ತಾರಾ ಅಂದರೆ ಸಾಕ್ಷಿಯು ಹಾದಿ ಇದೆ ಅದೇ ದಾರಿಯಿಂದ ಓಡಾಡುತ್ತಿದ್ದೇವೆ ಎಂದು ಉತ್ತರಿಸುತ್ತಾರೆ. ನಿಪಿ–6 ರಲ್ಲಿ ಕಾಣುವ ದಾರಿಯು ನಮ್ಮ ಕುಟುಂಬದವರಿಗೆ ಮಂಜೂರಾದ ಎಲ್ಲಾ ಸ್ವತ್ತುಗಳಿಗೆ ಸಂಪರ್ಕಿಸುವ ದಾರಿ ಅಂದರೆ ಸರಿ. ಈ ದಾವೆಯಲ್ಲಿ ದಾಖಲಿಸಿದ ತಕರಾರಿಗೆ

ಯಾರು ಮಾಹಿತಿ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಡಿ–2 ಗ್ರಾಮ ನಕಾಶೆಯಲ್ಲಿ ಗದ್ದೆ ಬಸಪ್ಪರವರ 5 ಎಕರೆ ಸ್ವತ್ತಿನಲ್ಲಿ ದಾರಿ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ–1 ದಿಃ 25.09.1958 ರಲ್ಲಿ ಆದಂತಹ ನಕ್ಷೆ ಅಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾಲ್ಕು ಸ್ವತ್ತುಗಳಲ್ಲಿರುವ ಮರಗಳನ್ನು ಕಡಿದು ಸಾಗಿಸಲು ಅರಣ್ಯ ಇಲಾಖೆಯವರು ಒಂದು ದಾರಿಯನ್ನು ತೋರಿಸಿರುತ್ತಾರೆ ಅಂದರೆ ಸಾಕ್ಷಿಯು ನಾವು ಅದೇ ದಾರಿಯಿಂದ ಓಡಾಡುತ್ತಿದ್ದೇವೆ ಎಂದು ಉತ್ತರಿಸುತ್ತಾರೆ. ಸದರಿ ದಾರಿಯು ಮರ ಖರೀದಿ ಮಾಡಿದವರಿಗೆ ಮಾತ್ರ ಓಡಾಡಲು ಅನುಮತಿ ನೀಡಿರುತ್ತಾರೆ ಅಂದರೆ ಸಾಕ್ಷಿಯು ಎಲ್ಲರಿಗೂ ಓಡಾಡಲು ಅನುಮತಿ ಇರುತ್ತದೆ ಎಂದು ಉತ್ತರಿಸುತ್ತಾರೆ. ನಿಡಿ–1 ರ ನಕ್ಷೆಯು ನಿಪಿ–2 ಕ್ಕೆ ವಿರುದ್ಧವಾಗಿದೆ ಅಂದರೆ ಸಾಕ್ಷಿಯು ವ್ಯತ್ಯಾಸವಿದೆ ಎಂದು ಉತ್ತರಿಸುತ್ತಾರೆ.

ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**